೩) ಶ್ರೀ ಜಿ. ನಾರಾಯಣಕುಮಾರ್, ಶಾಸಕರು : –,,–

೪) ಡಾ॥ ದೇ. ಜವರೇಗೌಡ, ಮೈಸೂರು : –,,–

೫) ಶ್ರೀ ಮಹದೇವ ಬಣಕಾರ್, ಮೋಟೆಬೆನ್ನೂರು : –,,–

೬) ಶ್ರೀ ಪಿ. ಕೆ. ಭಾಗೋಜಿ, ನಿವೃತ್ತ ಪ್ರಿನ್ಸಿಪಾಲರು : –,,–

೭) ಶ್ರೀ ಕಯ್ಯಾರ ಕಿಞಣ್ಣ ರೈ, ಪೆರಡಾಲ : –,,–

೮) ಶ್ರೀ ಮಹಾಮನಿ ಹೊಸಮನಿ, ಸೊಲ್ಲಾಪುರ : –,,–

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, 'ಈ' ಪ್ರಶ್ನೆಯಲ್ಲಿ ಆಡಳಿತದಲ್ಲಿ ಸಂಪೂರ್ಣ ಕನ್ನಡದ ಬಳಕೆಯಾಗಲು ಇನ್ನೆಷ್ಟು ಸಮಯ ಬೇಕಾದೀತು ? ಇದಕ್ಕೆ ಇರುವ ಆಡತಡೆಗಳೇನು ಎಂದು ಕೇಳಿದ್ದಕ್ಕೆ ಯಾವ ಆಡೆತಡೆಗಳಿಲ್ಲ, ಇನ್ನೂ ಸ್ವಲ್ಪ ಕಾಲ ಬೇಕು ಎಂದು ಹೇಳಿದ್ದಾರೆ. ಹಾಗಿದ್ದರೆ ಯಾವ ವಿಚಾರಗಳಿಗಾಗಿ ಇನ್ನೂ ಸ್ವಲ್ಪ ಕಾಲಬೇಕೆಂದು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈಗಾಗಲೇ, ಸಮಿತಿಯವರು ಕೊಟ್ಟಂಥ ಸಲಹೆಗಳನ್ನು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ವಿಭಾಗಮಟ್ಟದಲ್ಲಿ ಸಂಪೂರ್ಣವಾಗಿ ಜಾರಿಗೆ ತಂದಿದ್ದೇವೆ. ಸೆಕ್ರೇಟರಿಯೇಟ್‌ನಲ್ಲಿಯೂ ಕೂಡ ಬಹುತೇಕವಾಗಿ ರಾಜ್ಯದ ಮತ್ತು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಇರುವ ವ್ಯವಹಾರಗಳೆನ್ನೆಲ್ಲಾ ಕೂಡ ಕನ್ನಡದಲ್ಲಿಯೇ ಮಾಡುತ್ತಿದ್ದೇವೆ; ಕೇಂದ್ರ ಸರಕಾರದ ಮತ್ತು ಬೇರೆ ರಾಜ್ಯಗಳಿಗೆ ಸಂಬಂಧಪಟ್ಟಹಾಗೆ ಇರುವ ವಿಚಾರಗಳಲ್ಲಿ ಇಂಗ್ಲೀಷ್‌ನ್ನು ಬಳಕೆ ಮಾಡುತ್ತಾ ಇದ್ದೇವೆ. ವಿಧಾನಸೌಧದಲ್ಲಿ, ಸೆಕ್ರೇಟರಿಯೇಟ್‌ನಲ್ಲಿ ಸಂಪೂರ್ಣವಾಗಿ ಜಾರಿಗೆ ತರುವುದರ ಬಗ್ಗೆ ಕೆಲವು ತೊಂದರೆಗಳು ಇವೆ. ಅಧಿಕಾರಿಗಳಿಗೆ ಇಷ್ಟು ಚೆನ್ನಾಗಿ ಬರೆಯಲಿಕ್ಕೆ ಬರದಿರುವುದು ಹಾಗೆಯೇ ಅನುಡಾನವಾಗಿ ಬಂದಂಥ ಕೆಲವು ಕ್ಯಾಬಿಟ್ಸ್‌ನಿಂದಾಗಿ ಸ್ವಲ್ಪ ತೊಂದರೆಯಾಗಿದೆ. ಆದರೆ ಈ ಕುರಿತು ಸರಕಾರದ ನೀತಿ ಸ್ಪಷ್ಟವಾಗಿದೆ. ನೂರಕ್ಕೆ ನೂರರಷ್ಟು ಕನ್ನಡವನ್ನು ಆಡಳಿತಭಾಷೆಯಾಗಿ ಬಳಸಬೇಕೆಂದು ನಿರ್ದಿಷ್ಟವಾದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಸಲಹಾ ಸಮಿತಿಯವರು ಹೇಳಿದ ಎಲ್ಲಾ ಸೂಚನೆಗಳನ್ನು ಜಾರಿಗೆ ತರುತ್ತೇವೆ.

ಶ್ರೀ ಪಂಪಾಪತಿ.—ವಿಧಾನಸೌಧದಲ್ಲಿ ಪುಂಡಿಸಿದ ಒಂದು ಮಸೂದೆಯೂ ಕನ್ನಡದಲ್ಲಿಲ್ಲ .....

ರಾಜ್ಯದಲ್ಲಿರುವ ಸಣ್ಣ ನೀರಾವರಿ ಕೆರೆಗಳು

೧೯೪ (೪೬೬) ಶ್ರೀ ಆರ್. ರಾಯಪ್ಪ (ಹಿರಿಯೂರು).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ದೊಡ್ಡ, ಮಾಧ್ಯಮ ಮತ್ತು ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು? ಹೆಸರು ನೀಡುವುದು ?

ಆ) ಇವುಗಳಿಂದ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವಾಗುತ್ತದೆ ?

ಇ) ೧೯೮೬ ರಿಂದ ೧೯೮೮ರವರೆಗೆ ಎಷ್ಟು ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಹೆಚ್ಚಾಗಿದೆ ? ಇದು ಸೀಮಿತ ಜಿಲ್ಲೆಯಲ್ಲಿ ಆಗಲು ಕಾರಣವೇನು ?

ಈ) ಮಾಣಿವಿಲಾಸ ಸಾಗರ ಯೋಜನೆ ವರ್ಗದಲ್ಲಿ ಬರುತ್ತದೆ.

ಉ) ಈ ಕೆರೆಯಲ್ಲಿ ವರ್ಷವಿಡೀ ನೀರು ಇರುವ ಹಾಗೆ ಮಾಡುವ ಯೋಜನೆ ಸರ್ಕಾರದಲ್ಲಿದೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ರಾಜ್ಯದಲ್ಲಿರುವ ಕೆರೆಗಳಲ್ಲಿ ದೊಡ್ಡ, ಮಾಧ್ಯಮ ಮತ್ತು ಸಣ್ಣ ನೀರಾವರಿ ಕೆರೆ ಎಂಬ ವರ್ಗೀಕರಣ ಇಲ್ಲ. ಒಟ್ಟು ೩೬,೪೮೫ ಕೆರೆಗಳಿರುವುದರಿಂದ ಅವುಗಳ ಹೆಸರುಗಳನ್ನು ನೀಡಲು ಆಗುವುದಿಲ್ಲ.

ಆ) ೭ ೫೪ ಲಕ್ಷ ಹೆಕ್ಟೇರುಗಳು.

ಇ) ಕೆರೆಗಳಿಂದ ೮,೨೪೭ ಹೆಕ್ಟೇರುಗಳು, ಈ ಅವಧಿಯಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಜಿಲ್ಲೆಗಳಲ್ಲೂ ಕೆರೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಯಾವುದೇ ಜಿಲ್ಲೆಗೂ ಸೀಮಿತಗೊಂಡಿಲ್ಲ.

ಈ) ಮಧ್ಯಮ ನೀರಾವರಿ ಯೋಜನೆ.

ಉ) ಇಲ್ಲ.

ನಾನು ಈಗಾಗಲೇ ಉತ್ತರದಲ್ಲಿ ಒಟ್ಟು ಕೆರೆಗಳ ಸಂಖ್ಯೆಯನ್ನು ಕೊಟ್ಟಿದ್ದೇನೆ. ಇದು ದೊಡ್ಡ ಕೆರೆ, ಚಿಕ್ಕ ಕೆರೆ ಎಂದು ಅಲ್ಲ. ಮೈನರ್ ಇರಿಗೇಶನ್‌ನಲ್ಲಿ ಎಲ್ಲಾ ಕೆರೆಗಳು ಬರುತ್ತವೆ.

ಶ್ರೀ ಆರ್. ರಾಮಯ್ಯ —ಮಾನ್ಯ ಮುಖ್ಯಮಂತ್ರಿಯವರು ಕೆರೆಗಳ ವರ್ಗೀಕರಣ ಇಲ್ಲ ಎಂದು ಹೇಳಿದ್ದಾರೆ. ವಾಣಿವಿಲಾಸ ಕೆರೆಯನ್ನು ಮಧ್ಯಮ ನೀರಾವರಿ ಯೋಜನೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ, —ವಾಣಿವಿಲಾಸವು ಮಿಡಿಯಂ ಇರಿಗೇಶನ್.....

ಶ್ರೀ ಆರ್. ರಾಮಯ್ಯ.—ಈ ಕೆರೆಯನ್ನು ಬಹಳ ಪುರಾತನ ಕಾಲದಲ್ಲಿ ಕಟ್ಟಿರುವುದರಿಂದ ಅದರಲ್ಲಿ ನೀರು ಹೆಚ್ಚಿಗೆ ನಿಲ್ಲುವುದಿಲ್ಲ. ಅದನ್ನು ದಿಪಿಲ್ಟ್ ಮಾಡಿಸಿದರೆ ಇನ್ನೂ ಹೆಚ್ಚಿನ ಪ್ರದೇಶವನ್ನು ನೀರಾವರಿಗೆ ಒಳಪಡಿಸಬಹುದು. ಎರಡನೇಯದಾಗಿ ವಾಣಿವಿಲಾಸಸಾಗರವು ವಿಷ್ಯ ಖಂಡದಲ್ಲಿಯೇ ಮೊದಲನೇಯದಾಗಿ ಕಟ್ಟಿದಂಥ ಕೆರೆಯಾಗಿದೆ. ಇದಕ್ಕೆ ಕಾಯಂ ಆಗಿ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೆಳಿ ರೈತರು ಅಹವಾಲನ್ನು ಕೊಟ್ಟಿದ್ದರೂ ಕೂಡ ಸರಕಾರದವರು ಇಲ್ಲ ಎಂದು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಅದು ಸರಿಯಲ್ಲ. ಆದುದರಿಂದ ಈ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ಈ ವಿಚಾರದಲ್ಲಿ ಸರಕಾರವು ಈಗಾಗಲೇ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ವಿಶ್ವಬ್ಯಾಂಕ್‌ನವರ ಜೊತೆಗೆ ಪತ್ರವ್ಯವಹಾರ ಮಾಡುತ್ತಾ ಇದ್ದೇವೆ. ಮೊದಲು ಹೂಳು ತೆಗೆಯುವುದು ಅಂದರೆ ಅಷ್ಟು ಆರ್ಥಿಕವಾಗಿ ಆನುಕೂಲವಲ್ಲ ಎಂಬ ಅಭಿಪ್ರಾಯ ಇತ್ತು. ಅಭಾವ ಪರಿಹಾರ ಕಾಮಗಾರಿಗಳನ್ನು ಮಾಡುವಾಗ ಹೂಳು ತೆಗೆಯುವ ಕೆಲಸ ಮಾಡುವುದು ಯೋಗ್ಯ ಎಂದು ನಾನು ಅಭಿಪ್ರಾಯ ಪಟ್ಟಿದ್ದೇನೆ. ಆ ಪ್ರಕಾರವಾಗಿ ಕುಡಿಯುವ ನೀರಿನ ಕೆರೆ ಮತ್ತು ನೀರಾವರಿ ಕೆರೆಗಳ ಹೂಳು ತೆಗೆಯತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ರಾಮಯ್ಯನವರು ವಾಣಿವಿಲಾಸ ಸಾಗರದ ಬಗ್ಗೆ ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. —ವಾಣಿವಿಲಾಸ ಸಾಗರದ ಬಗ್ಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ. ಲಕ್ಕಪ್ಪ. —ಅಧ್ಯಕ್ಷರೇ, ಕೆರೆಗಳ ಹೊಳೆತ್ತುವ ಬಗ್ಗೆ ಹೇಳಿದ್ದಾರೆ. ಆದರೆ ಬಹಳ ಕಡೆ ಕೆರೆಗಳ ಅಂಗಳ ಎನ್‌ಕ್ರೋಚ್ ಆಗಿದೆ. ಆದ್ದರಿಂದ ಒರಿಜಿನಲ್ ಪ್ಲಾನ್ ಇಟ್ಟುಕೊಂಡು ಅಂಗಳವನ್ನು ಅಳತೆ ಮಾಡಿಸಿ ಎನ್‌ಕ್ರೋಚಾಗಿರುವ ಭಾಗವನ್ನು ಖುಲ್ಲಾ ಮಾಡಿಸುವ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯೋಚಿಸುತ್ತೇನೆ.
ಅಧ್ಯಕ್ಷರು.—ಶ್ರೀ ಜಿ. ರಾಜುಗೌಡರ ೧೩ನೇ ಪ್ರಶ್ನೆ ಮುಂದೆ ಹೋಗಿದೆ.

ಶ್ರೀ ರಾಜುಗೌಡ.—ಸ್ವಾಮಿ ನನ್ನ ಮೂರು ಪ್ರಶ್ನೆಗಳು ಮುಂದಕ್ಕೆ ಹೋಗಿವೆ. ಹೀಗೇ ಆದರೆ ಇನ್ನು ಮುಂದೆ ಪ್ರಶ್ನೇ ಕೇಳುವುದಿಲ್ಲ.

ಶ್ರೀ ಎಸ್. ಆರ್. ಬೊಪ್ಪಾಯಿ.—ನನ್ನ ಮುಂದಿನ ಟರ್ನ್‌ನಲ್ಲಿ ಅದನ್ನು ಸೇರಿಸಿ ಎಂದು ಕೋರುತ್ತೇನೆ.

ಅಧ್ಯಕ್ಷರು.—ಆಯಿತು.

ಶಹಾಪುರಕೆ ೩೦ ಹಾಸಿಗೆಗಳ ಆಸ್ಪತ್ರೆ

೧೯೬ (೪೧೧) **ಶ್ರೀ ಶಿವಶೇಖರ ಗೌಡ ಶಿರವಾಳ (ಶಹಾಪುರ).**—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೩–೮೪ ರಲ್ಲಿ ೩೦ ಹಾಸಿಗೆಗಳಿಂದ ಕೂಡಿದ ಆಸ್ಪತ್ರೆಯೊಂದನ್ನು ಶಹಾಪುರಕ್ಕೆ ಮಂಜೂರು ಮಾಡಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಇದುವರೆವಿಗೂ ಆಸ್ಪತ್ರೆಯನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ? ಹಾಗೂ ಎಂದು ಪ್ರಾರಂಭಿಸಲಾಗುವುದು ?

ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಸಚಿವರು).—

ಅ) —ಇಲ್ಲಾ—

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ವೀರಯ್ಯಸ್ವಾಮಿ (ಶ್ರೀ ಶಿವಶೇಖರ ಗೌಡರ ಪರವಾಗಿ). ಅಧ್ಯಕ್ಷರೇ, ಹೋದವರ್ಷ ಇದೇ ಪ್ರಶ್ನೆಯನ್ನು ನಾನೇ ಕೇಳಿದ್ದೇ, ಆ ಸಂದರ್ಭದಲ್ಲಿ ಈ ವರ್ಷದ ಬಜೆಟ್‌ನಲ್ಲಿ ಅದನ್ನು ಸೇರಿಸುತ್ತೇವೆಂದಿದ್ದರು. ಆದರೆ ಸೇರಿಸಿಲ್ಲ. ಸುಮಾರು ೩೦ ಸಾವಿರ ಜನಸಂಖ್ಯೆ ಇರುವ ಪಟ್ಟಣ ಶಹಾಪುರ. ಇಡೀ ತಾಲ್ಲೂಕಿನಲ್ಲಿ ಬೇರೆಲ್ಲೂ ದೊಡ್ಡ ಆಸ್ಪತ್ರೆ ಇಲ್ಲ. ಆದ್ದರಿಂದ ಬಹಳ ಆಗತ್ಯತೆ ಇದೆ. ಈ ಸಲ ಅದ್ಯತೆ ಮೇಲೆ ಮಂಜೂರು ಮಾಡಿ ಆಸ್ಪತ್ರೆ ಕಟ್ಟಡ ಕಟ್ಟಿಸಿಕೊಡುತ್ತೇವೆ ಎಂದು ಸರ್ಕಾರ ಭರವಸೆ ಕೊಡಲು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಅಲ್ಲಿ ಹಾಲಿ ಇರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕಾದರೆ ೩೫ ಲಕ್ಷ ಬೇಕಾಗುತ್ತದೆ. ಅದಕ್ಕೆ ತಗಲುವ ಈ ವೆಚ್ಚವನ್ನು ಭರಿಸಲು ಜಿಲ್ಲಾಪರಿಷತ್ ಸಾಕಷ್ಟು ಹಣವನ್ನು ಒದಗಿಸಿದ ನಂತರ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು.

ಶ್ರೀ ಎಂ. ವೀರಯ್ಯಸ್ವಾಮಿ.—ಅಲ್ಲಿ ಸಿಬ್ಬಂದಿ ಸಂಬಳಕ್ಕೇ ಹಣವಿಲ್ಲ. ಇನ್ನು ಆಸ್ಪತ್ರೆ ಕಟ್ಟಲು ಹಣ ಎಲ್ಲಿಂದ ಬರುತ್ತದೆ ?

ರಾಮನಗರದಲ್ಲಿ ಅರಣ್ಯಕ ಠಾಣೆ

೧೯೭ (೪೫೧) **ಶ್ರೀ ಆರ್. ವೆಂಕಟರಾಮಯ್ಯ (ಮಾಗಡಿ).** ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಮನಗರ ಟೌನ್ ಪೊಲೀಸ್ ಠಾಣೆ ಮತ್ತು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಯಾದ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರು ಸುಮಾರು ೧೦–೧೫ ವರ್ಷಗಳಿಂದಲೂ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?